ಇ) ಸದರಿ ವ್ಯವಸ್ಥೆಯನ್ನು ಕೂಡಲೇ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ ಯಾವಾಗ ತರಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಬಿದ್ದ ಮರಗಳನ್ನು ಪ್ರತಿ ವರ್ಷವು ಅರಣ್ಯ ಇಲಾಖೆಯು ಅರಣ್ಯಗಳಿಂದ ತೆಗೆದು ಮಾರಾಟ ಮಾಡಲಾಗುತ್ತಿದೆ. ಆದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಅಭಯಾರಣ್ಯಗಳಲ್ಲಿ ಬಿದ್ದಿರುವ ಮರಗಳನ್ನು ತೆಗೆಯಲು ಅವಕಾಶವಿರುವುದಿಲ್ಲ.

ಆ) ಅರಣ್ಯದಲ್ಲಿ ವಯಸ್ಸಾದ ಮರಗಳನ್ನು ಕಡಿಯುವಂತೆ ಸರ್ಕಾರವು ಇತ್ತೀಚೆಗೆ ಆದೇಶ ನೀಡಿದೆ. ಈ ಆದೇಶದ ಪ್ರಕಾರ ಮರಗಳ ಸಾಂದ್ರತೆ ತೃಪ್ತಿಕರವಾಗಿರುವ, ಎಲೆ ಉದುರುವ ಅರಣ್ಯ ಪ್ರದೇಶಗಳಲ್ಲಿ ಇರುವ ಬಲಿತ ಮರಗಳನ್ನು ಕಾರ್ಯ ಯೋಜನೆಯಂತೆ ನಿಗದಿಪಡಿಸಿ ತೆಗೆಯಲು ಅವಕಾಶ ಇದೆ. ಆದರೆ ಈ ಆದೇಶದ ಅಡಿ ಈವರೆಗೆ ಯಾವುದೇ ಕಾರ್ಯ ಯೋಜನೆಗಳನ್ನು ಸಿದ್ಧಪಡಿಸಲಾಗಿಲ್ಲ. ಅದರಂತೆ ಯಾವುದೇ ವಯಸ್ಸಾದ ಮರಗಳನ್ನು ಕತ್ತರಿಸಲಾಗಿಲ್ಲ.

ಇ) ಅರಣ್ಯದಿಂದ ಸಾಗಣೆಕೆಯಾದ ಮರಗಳನ್ನು ಸರ್ಕಾರದ ನಾಟಾ ಸಂಗ್ರಹಾಲಯದಲ್ಲಿ ಸಾರ್ವಜನಿಕರಿಗೆ ಹರಾಜು ಮೂಲಕ ಮಾರಾಟ ಮಾಡಲಾಗುತ್ತಿದೆ. ಈ ಮರಗಳನ್ನು ಸುಧಾರಿತ ದರದಲ್ಲಿ ಕೊಡಲು ಅವಕಾಶವಿರುವುದಿಲ್ಲ.

ಹೊಸದಾಗಿ ತಾಲ್ಲೂಕುಗಳನ್ನು ರಚಿಸುವುದು

51 (238) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊಸದಾಗಿ ತಾಲ್ಲೂಕುಗಳನ್ನು ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ, ಯಾವ ಜಿಲ್ಲೆಯಲ್ಲಿ ಯಾವ ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು; (ಜಿಲ್ಲಾವಾರು ಮಾಹಿತಿ ನೀಡುವುದು)?

ಇ) ಸದರಿ ತಾಲ್ಲೂಕುಗಳನ್ನು 2002-2003ನೇ ಸಾಲಿನಲ್ಲಿ ರಚಿಸಲಾಗುವುದೇ;

ಈ) ರಚಿಸುವುದಾದಲ್ಲಿ ಕಾಲಮಿತಿ ನಿಗದಿಪಡಿಸಲಾಗಿದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ, ಆದರೆ ಎಲ್ಲೆಲ್ಲಿ ಕೆಲಸದ ಒತ್ತಡ ಇದೆಯೋ ಅಲ್ಲಿ ವಿಶೇಷ ತಹಸೀಲ್ದಾರ್‌ರನ್ನು ನೇಮಕ ಮಾಡುವ ಬಗ್ಗೆ ಸರ್ಕಾರವು ತೀರ್ಮಾನಿಸಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) - ಉದ್ಭವಿಸುವುದಿಲ್ಲ -

ಇ) - ಉದ್ಭವಿಸುವುದಿಲ್ಲ -

ಈ) - ಉದ್ಭವಿಸುವುದಿಲ್ಲ -

ಮಿನಿ ವಿಧಾನಸೌಧದ ಕಾಮಗಾರಿ

53 (314) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕು ಪ್ರದೇಶಗಳಲ್ಲಿ ಮಿನಿ ವಿಧಾನಸೌಧ ಕಟ್ಟುವ ವಿಚಾರ ಸರ್ಕಾರದ ಮುಂದಿದೆ;

ಆ) ಹುಬ್ಬಳ್ಳಿಯಲ್ಲಿ ಮಿನಿ ವಿಧಾನ ಸೌಧ ಕಟ್ಟುವ ಕಾರ್ಯ 18 ತಿಂಗಳು ಕಳೆದರೂ ಪ್ರಾರಂಭ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧ ಕಟ್ಟುವ ವಿಚಾರ ಸರ್ಕಾರದ ಮುಂದಿದೆ.

ಆ) ಹುಬ್ಬಳ್ಳಿಯಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಕಾರ್ಯ ಇನ್ನು ಪ್ರಾರಂಭವಾಗಿಲ್ಲ.

ಇ) ಸಾಲ ಪಡೆಯಲು ಸರ್ಕಾರದಿಂದ ಅವಶ್ಯವಿರುವ ಮಂಜೂರಾತಿ ಪಡೆದ ಕೂಡಲೇ ಹುಬ್ಬಳ್ಳಿಯಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು.

ನಬಾರ್ಡ್ ಯೋಜನೆ ಕಾಮಗಾರಿಗಳು

54 (144) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸಿದ ರಸ್ತೆಗಳು ಯಾವುವು; (ಕ್ಷೇತ್ರವಾರು ವಿವರ ನೀಡುವುದು)

ಆ) ಬ್ರಹ್ಮಾವರ ಕ್ಷೇತ್ರದ ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ; ಖರ್ಚಾದ ಮೊತ್ತವೆಷ್ಟು?

ಇ) ಬಾಕಿ ಇರುವ ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ; ಅವುಗಳ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಉಡುಪಿ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ ಲೋಕೋಪಯೋಗಿ ಇಲಾಖೆಯಿಂದ ಆರ್.ಐ.ಡಿ.ಎಫ್. 3 ರಿಂದ 7 ರವರೆಗೆ ಒಟ್ಟು 1168.47 ಲಕ್ಷ ರೂ. ಮೊತ್ತದ 28 ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ 22 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಕ್ಷೇತ್ರವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.

ಆ) ಬ್ರಹ್ಮಾವರ ಕ್ಷೇತ್ರದಲ್ಲಿ 247.59 ಲಕ್ಷ ರೂ. ಮೊತ್ತದ 7 ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ 65.60 ಕಿಮೀ ಉದ್ದದ 6 ರಸ್ತೆಗಳನ್ನು 221.00 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.
ವಿವರವನ್ನು ಅನುಬಂಧದಲ್ಲಿ ನೀಡಿದೆ.

ಇ) ನಬಾರ್ಡ್ ಯೋಜನೆಯಡಿ ಪ್ರಸ್ತುತ 2002-03ನೇ ವರ್ಷದಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ಯೋಜನೆ ಇರುವುದಿಲ್ಲ.